ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಶಾಖೆ / ವಿಷಯ : DEPARTMENT / SUBJECT: ಇತರೆ ರಾಜ್ಯ ಮಾಹಿತಿ

ತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 5/4/21

# ಭೀಕರ ದಾಳಿಗೆ 22 ಯೋಧರು ಹುತಾತ್ಮ

## ಭದ್ರತಾ ಪಡೆಗಳ ಹಾದಿತಪ್ಪಿಸಿ ಕುಕೃತ್ಯ



ರಾಯ್ಪುರ: ಛತ್ತೀಸ್‌ಗಡದ ದಟ್ಟಾರಣ್ಯದಲ್ಲಿ ಭಾನುವಾರ ಬುಲೆಟ್ ಹೊಕ್ಕಿರುವ 17 ಮಂದಿ ಯೋಧರ ಮೃತದೇಹಗಳು ಪತ್ತೆಯಾಗಿದ್ದು ಈ ಮೂಲಕ ನಕ್ಸಲರೊಂದಿಗೆ ಶನಿವಾರ ನಡೆದ ಎನ್‌ಕೌಂಟರ್‌ನಲ್ಲಿ ಹುತಾತ್ಮರಾದ ಯೋಧರ ಸಂಖ್ಯೆ 22ಕ್ಕೇರಿದಂತಾಗಿದೆ. ಇದು ಕಳೆದೊಂದು ವರ್ಷದಲ್ಲೇ ನಕ್ಸಲರು ನಡೆಸಿದ ಅತ್ಯಂತ ಭೀಕರ ದಾಳಿಯಾಗಿದೆ. 400ರಷ್ಟು ಕೆಂಪು ಉಗ್ರರು ನಡೆಸಿದ ಈ ದಾಳಿಯಲ್ಲಿ 30ಕ್ಕೂ ಹೆಚ್ಚು ಯೋಧರು ಗಾಯಗೊಂಡಿದ್ದಾರೆ.

ಹುತಾತ್ಮ ಯೋಧರ ಪೈಕಿ 8 ಮಂದಿ ಸಿಆರ್‌ಪಿಎಫ್‌ಗೆ ಸೇರಿದ್ದರೆ, ಬಸ್ತಾರಿಯಾ ಬೆಟಾಲಿಯನ್‌ನ ಒಬ್ಬರು, ಉಳಿದವರು ಡಿಆರ್‌ಜಿ ಮತ್ತು ವಿಶೇಷ ಕಾರ್ಯಪಡೆಗೆ ಸೇರಿದವರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಕ್ಸಲರ ಭದ್ರಕೋಟೆ ಎಂದೇ ಪರಿಗಣಿಸಲಾದ ದಕ್ಷಿಣ ಬಸ್ತಾರ್ ಅರಣ್ಯದಲ್ಲಿ ಶನಿವಾರ ಸುಮಾರು 2 ಸಾವಿರ ಭದ್ರತಾ ಸಿಬ್ಬಂದಿ ನಕ್ಸಲ್ ನಿಗ್ರಹ ಕಾರ್ಯಾಚರಣೆ ಆರಂಭಿಸಿದ್ದರು. ಈ ವೇಳೆ, ಅಲ್ಲಿದ್ದ ನಕ್ಸಲರು ಲೈಟ್ ಮಷೀನ್ ಗನ್, ದೇಸಿ ರಾಕೆಟ್ ಹಾಗೂ ಐಇಡಿ ಮೂಲಕ ಏಕಾಏಕಿ ದಾಳಿ ನಡೆಸಿದ್ದು 3 ಗಂಟೆಗಳ ಕಾಲ ನಡೆದ ಚಕಮಕಿಯಲ್ಲಿ ಐವರು ಯೋಧರು ಹುತಾತ್ಮರಾಗಿ, ಮೂವರು ನಕ್ಸಲರು ಹತರಾಗಿದ್ದರು. ಜತೆಗೆ, ಹಲವು ಯೋಧರು ನಾಪತ್ತೆಯಾಗಿದ್ದರು. ಕಣ್ಮರೆಯಾಗಿದ್ದ 17 ಮಂದಿಯ ಮೃತದೇಹ ಭಾನುವಾರ ಪತ್ತೆಯಾಗಿದ್ದು ಎನ್‌ಕೌಂಟರ್ ವೇಳೆ ಕೆಂಪು ಉಗ್ರರು ನಡೆಸಿರುವ ರಕ್ತಪಿಪಾಸು ಕೃತ್ಯಗಳೂ ಬಹಿರಂಗಗೊಂಡಿವೆ.

### ಕೈ ಕತ್ತರಿಸಿ ಕೊಂದ ಪಾಪಿಗಳು

ಇನ್‌ಸ್ಪೆಕ್ಟರ್ ಒಬ್ಬರನ್ನು ನಕ್ಸಲರು ಅತ್ಯಂತ ಕ್ರೂರವಾಗಿ ಹಿಂಸಿಸಿ ಕೊಂದಿದ್ದಾಗಿ ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ಈ ಎನ್‌ಕೌಂಟರ್ ಎಷ್ಟು ಸಮೀಪದಲ್ಲಿ ನಡೆಯುತ್ತಿತ್ತೆಂದರೆ, ಇನ್‌ಸ್ಪೆಕ್ಟರ್ ತಮ್ಮ ರೈಫಲ್‌ಗೆ ಹೊಸ ಮ್ಯಾಗಜಿನ್ ತುಂಬಿಸುತ್ತಿದ್ದಾಗ, ಅಲ್ಲೇ ಇದ್ದ ನಕ್ಸಲರು ಅವರನ್ನು ಸುತ್ತುವರಿದು, ಕೈಗಳನ್ನೇ ಕತ್ತರಿಸಿ ಗುಂಡು ಹಾರಿಸಿ ಕೊಂದರು ಎಂದು ಅಧಿಕಾರಿಯೊಬ್ಬರು ಬಹಿರಂಗಪಡಿಸಿದ್ದಾರೆ. ಅಲ್ಲದೆ, ನಕ್ಸಲರು ಹುತಾತ್ಮ ಯೋಧರ ಕೈಯ್ಯಲ್ಲಿದ್ದ ಶಸ್ತ್ರಾಸ್ತ್ರಗಳು, ಶೂಗಳು ಹಾಗೂ ಬುಲೆಟ್‌ಪ್ರೂಫ್ ಜಾಕೆಟ್‌ಗಳನ್ನು ಕಸಿದು ಪರಾರಿಯಾಗಿದ್ದಾರೆ ಎಂದೂ ಅವರು ಹೇಳಿದ್ದಾರೆ.

> ಛತ್ತೀಸ್‌ಗಢದಲ್ಲಿ ಮಾವೋವಾದಿಗಳ ವಿರುದ್ಧದ ಕಾರ್ಯಾಚರಣೆಯಲ್ಲಿ ಭದ್ರತಾ ಪಡೆ ಯೋಧರು ಹುತಾತ್ಮರಾಗಿರುವುದು ನೋವು ತಂದಿದೆ. ಅವರ ತ್ಯಾಗವನ್ನು ದೇಶ ಯಾವತ್ತೂ ಮರೆಯದು. ಮೃತರ ಕುಟುಂಬಗಳಿಗೆ ಸಾಂತ್ವನ ಹೇಳುತ್ತೇನೆ.
>
> - ರಾಮನಾಥ್ ಕೋವಿಂದ್, ರಾಷ್ಟ್ರಪತಿ